

## ಮರ ಕಡಿಯುವವ ಮತ್ತು ಹಕ್ಕಿಗಳ ಮನೆ

ಒಂದು ದಟ್ಟವಾದ ಕಾಡಿನಲ್ಲಿ ತುಂಬಾ ಹಳೆಯದಾದ ಮತ್ತು ದೊಡ್ಡದಾದ ಒಂದು ಆಲದ ಮರವಿತ್ತು. ಆ ಮರದ ಕೊಂಬೆಗಳ ಮೇಲೆ ನೂರಾರು ಹಕ್ಕಿಗಳು ಗೂಡು ಕಟ್ಟಿಕೊಂಡು ಆನಂದವಾಗಿ ವಾಸವಾಗಿದ್ದವು. ಮರವು ಹಕ್ಕಿಗಳಿಗೆ ಆಶ್ರಯವನ್ನು ಮತ್ತು ತಿನ್ನಲು ಹಣ್ಣುಗಳನ್ನು ನೀಡುತ್ತಿತ್ತು.

ಒಂದು ದಿನ, ಕೈಯಲ್ಲಿ ಕೊಡಲಿ ಹಿಡಿದುಕೊಂಡ ಮರ ಕಡಿಯುವವನೊಬ್ಬ ಆ ಕಾಡಿಗೆ ಬಂದನು. ಅವನು ಆ ದೊಡ್ಡ ಆಲದ ಮರವನ್ನು ನೋಡಿ, "ಅಬ್ಬಾ! ಈ ಮರವನ್ನು ಕಡಿದರೆ ನನಗೆ ತುಂಬಾ ಸೌದೆ ಸಿಗುತ್ತದೆ, ಅದನ್ನು ಮಾರಿ ನಾನು ಹಣ ಗಳಿಸಬಹುದು." ಎಂದು ಕೊಡಲಿ ಎತ್ತಿದನು. ಆಗ ಮರದ ಮೇಲಿದ್ದ ಎಲ್ಲಾ ಹಕ್ಕಿಗಳು ಒಟ್ಟಿಗೆ ಚಿಲಿಪಿಲಿ ಎಂದು ಜೋರಾಗಿ ಅಳುತ್ತಾ ಬೇಡಿಕೊಂಡವು: "ಅಯ್ಯೋ ಅಣ್ಣಾ, ಈ ಮರವನ್ನು ಕಡಿಯಬೇಡ! ಇದು ನಮ್ಮ ಮನೆ. ನಾವೆಲ್ಲಾ ಎಲ್ಲಿಗೆ ಹೋಗಬೇಕು?"

ಮರವು ಕೂಡ ತನ್ನ ಎಲೆಗಳನ್ನು ಅಲ್ಲಾಡಿಸುತ್ತಾ ಗಾಳಿಯಲ್ಲಿ ತಲೆಯಾಡಿಸಿ ವಿನಂತಿಸಿತು. ಮರ ಕಡಿಯುವವನು ಸ್ವಲ್ಪ ಸಮಯ ಯೋಚಿಸಿದನು. ತನ್ನ ಸ್ವಾರ್ಥಕ್ಕಾಗಿ ಇಷ್ಟೊಂದು ಹಕ್ಕಿಗಳ ಮನೆಯನ್ನು ನಾಶ ಮಾಡುವುದು ಸರಿಯೇ? ಕಡೆಗೆ ಅವನಿಗೆ ತನ್ನ ತಪ್ಪಿನ ಅರಿವಾಯಿತು. ಅವನು ಕೊಡಲಿಯನ್ನು ಕೆಳಗಿಟ್ಟು, "ನಾನು ಈ ಮರವನ್ನು ಕಡಿಯುವುದಿಲ್ಲ. ಪ್ರಕೃತಿಯನ್ನು ರಕ್ಷಿಸುವುದು ನನ್ನ ಕರ್ತವ್ಯ" ಎಂದು ಅಲ್ಲಿಂದ ಹೊರಟುಹೋದನು. ಎಲ್ಲಾ ಹಕ್ಕಿಗಳು ಸಂತೋಷದಿಂದ ಹಾಡಿದವು.

ಅವಲೋಕನ:- ವಿದ್ಯಾರ್ಥಿಗಳು ಪಾತ್ರದ ಸನ್ನಿವೇಶಕ್ಕೆ ತಕ್ಕಂತೆ ತಮ್ಮ ಅನಿಸಿಕೆಯನ್ನು ತಾರ್ಕಿಕ ಕಾರಣಗಳೊಂದಿಗೆ ವ್ಯಕ್ತಪಡಿಸುತ್ತಿದ್ದಾರೆಯೇ ಎಂಬುದನ್ನು ಗಮನಿಸಿ.

LIVEWORKSHEETS